# ಸರಕಾರಿ ಏಜೆನ್ಸಿಗಳಿಂದ 50000 ಟನ್‌ಗಳಿಗೂ ಮಿಕ್ಕಿ ಬೇಳೆಕಾಳು ಖರೀದಿ

ಈ ಬಾರಿ ಸರಕಾರಿ ಏಜೆನ್ಸಿಗಳು ಖಾರಿಫ್ ಬೆಳೆಯಿಂದ 50000 ಟನ್‌ಗಳಿಗೂ ಮೀರಿ ಬೇಳೆಕಾಳು, ತೊಗರಿ ಮತ್ತು ಉದ್ದು ಕಾಪು ದಾಸ್ತಾನಗಾಗಿ ಖರೀದಿಸಿವೆಯೆನ್ನಲಾಗಿದೆ. ಸರಕಾರಿ ಏಜೆನ್ಸಿಗಳಾದ ಎಫ್‌ಸಿಐ, ಎಸ್‌ಎಫ್‌ಎಸಿ ಮತ್ತು ರೈತ ಸಹಕಾರಿ ನಾಫೆಡ್‌ಗಳು ರಾಬಿ ಬೆಳೆಯಲ್ಲಿ 1 ಲಕ್ಷ ಟನ್ ಮಸೂರ್ ಮತ್ತು ಕಡ್ಲೆ ಕಾಪು ದಾಸ್ತಾನಗಾಗಿ ಖರೀದಿಸಲಿವೆಯೆನ್ನಲಾಗಿದೆ.

ಹಿಂದಿನ ಅವಧಿಯಲ್ಲಿ ಸರಕಾರ 4.5 ಮಿಲಿಯನ್ ಟನ್ ಬೇಳೆಕಾಳು ಆಮದು ಮಾಡಿತ್ತೆನ್ನಲಾಗಿದೆ. ಈ ವರ್ಷದ ಬೇಳೆಕಾಳು ಆಮದು 4.1 ಮಿಲಿಯನ್ ಟನ್‌ಗಳಾಗಬಹುದೆನ್ನಲಾಗಿದೆ. ಅಲ್ಲದೆ ಖಾಸಗಿ ಆಮದುದಾರರು ಹಾಗೂ ಎಂಎಂಟಿಸಿ 5000 ಟನ್ ತೊಗರಿ ಬೇಳೆ ಆಮದು ಮಾಡಿ ದೇಶೀ ಪೂರೈಕೆ ಹೆಚ್ಚಳವಾಗುವಲ್ಲಿ ಸಹಕರಿಸಿದ್ದವು.

ಈ ಸಲ ಗ್ರಾಹಕ ವ್ಯವಹಾರ ಸಚಿವಾಲಯ ಸಮಯಕ್ಕನುಗುಣವಾಗಿ ಮುಂಚಿತವಾಗಿ ನೀರುಳ್ಳಿ ಮತ್ತು ಬೇಳೆಕಾಳು ಆಮದು ಯೋಜನೆ ರೂಪಿಸಲು ಕೇಳಿಕೊಂಡಿದ್ದು, ಗ್ರಾಹಕರು ಒಂದೇ ಬಾರಿ ದರ ಹೆಚ್ಚಳದ ಸಂಕಷ್ಟಕ್ಕೊಳಗಾಗದಂತೆ ದರ ಹೆಚ್ಚಳದ ಸಂದರ್ಭ ಮಧ್ಯ ಪ್ರವೇಶಿಸಲು ಕೇಳಿಕೊಂಡಿದೆಯೆನ್ನಲಾಗಿದೆ.